ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ,
ಚಾವಿಸನಿನಿ, ಮೈಸೂರು
Telephone No: 9448994705

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
Corporate Office, Procurement Section,
CESC, Mysuru-570017.
Website: www.cescmysore.org
E-mail ID: gmpurc@cescmysore.org

Company Identity Number(CIN): U40109KA2004SGC035177

ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)-1/2023-24/ cys-227 ದಿನಾಂಕ: 15 MAY 2023
ಲಗತ್ತು: ಉಲ್ಲೇಖಿತ ಪತ್ರ

## ಸುತ್ತೋಲೆ

**ವಿಷಯ:** ಎಲ್ಲಾ ಸಂಗ್ರಹಣಾ ಘಟಕಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ 2.0 https://kppp.karnataka.gov.in ಮೂಲಕ ಟೆಂಡರ್ / ಹರಾಜು ಪ್ರಕ್ರಿಯೆಗಳನ್ನು ಕೈಗೊಳ್ಳುವ ಕುರಿತು.

**ಉಲ್ಲೇಖ:** ಇ-ಸಂಗ್ರಹಣಾ ಕೋಶ, ಇ-ಆಡಳಿತ ಕೇಂದ್ರ, ಯೋಜನಾ ನಿರ್ದೇಶಕರುರವರ ಪತ್ರ ಸಂಖ್ಯೆ: CEG-13011/3/2021-EPROCUREMENT Date: 11-05-2023

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರವು ಸ್ವಯಂವೇದ್ಯವಾಗಿದ್ದು, ಎಲ್ಲಾ ಟೆಂಡರ್‌ಗಳನ್ನು ಸಂಗ್ರಹಣಾ ಘಟಕಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ 2.0 https://kppp.karnataka.gov.in ಮೂಲಕ ಟೆಂಡರ್ / ಹರಾಜು ಪ್ರಕ್ರಿಯೆಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ 2.0 ಪೋಸ್ಟ್ ಮ್ಯಾಪಿಂಗ್ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದ್ದು ಸಂಗ್ರಹಣಾ ಬಳಕೆದಾರರಿಗೆ ನೀಡುವ Unique identity login iD ಯನ್ನು ಅವರುಗಳು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಿಗೆ (ಪೋಸ್ಟ್ ಮ್ಯಾಪಿಂಗ್) ಮಾಡಲಾಗುವುದು.

ಈ ಹಿನ್ನಲೆಯಲ್ಲಿ, ಎಲ್ಲಾ ಇಲಾಖೆಗಳ/ಮಂಡಳಿಗಳ/ನಿಗಮಗಳ/ಸಂಸ್ಥೆಗಳ ಸಂಗ್ರಹಣಾ ಪ್ರಾಧಿಕಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ 2.0 ತಂತ್ರಾಂಶದ ಲಾಗಿನ್ ಐಡಿಗಳನ್ನು ಪಡೆಯಲು ಇ-ಸಂಗ್ರಹಣಾ ಕೋಶವನ್ನು ಸಂಪರ್ಕಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಪತ್ರದಲ್ಲಿ ನೀಡಿರುವ ಸಿಬ್ಬಂದಿಗಳನ್ನು ಸಂಪರ್ಕಿಸಲು ಈ ಮೂಲಕ ತಿಳಿಸಲಾಗಿದೆ.

15/5/23
ಪ್ರಧಾನ ವ್ಯವಸ್ಥಾಪಕರು(ಖರೀದಿ)
ಚಾ.ವಿ.ಸ.ನಿ.ನಿ., ಮೈಸೂರು

**ಪ್ರತಿಗಳು:**

1. ಮುಖ್ಯ ಇಂಜಿನಿಯರ್ (ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು ಮತ್ತು ಹಾಸನ ರವರ ಮಾಹಿತಿಗಾಗಿ
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾವಿಸನಿನಿರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
4. ಮು.ಕ

CENTRE FOR e-GOVERNANCE
(Society established by the Government of Karnataka under e-Governance Secretariat, DPAR [AR] and registered under Karnataka Societies Registration Act, 1960);
e-Procurement Cell, 4th Floor, Sri Aravinda Bhavan, Mythic Society Building, Nrupathunga Road Bangalore – 560 001
Phone: 080 -22234115, 22230960 e-mail:pdeproc@karnataka.gov.in

No.CEG-13011/3/2021-EPROCUREMENT **Date:11/05/2023**

ಇವರಿಗೆ,
ವ್ಯವಸ್ಥಾಪಕ ನಿರ್ದೇಶಕರು
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ,
#29, ನಿಗಮ ಕಛೇರಿ,
ವಿಜಯನಗರ 2ನೇ ಹಂತ,ಹಿನಕಲ್,
ಮೈಸೂರು-570017

ಮಾನ್ಯರೇ

ವಿಷಯ: ಎಲ್ಲಾ ಸಂಗ್ರಹಣಾ ಘಟಕಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ 2.0 https://kppp.karnataka.gov.in ಮೂಲಕ ಟೆಂಡರ್/ ಹರಾಜು ಪ್ರಕ್ರಿಯೆಗಳನ್ನು ಕೈಗೊಳ್ಳುವ ಕುರಿತು.

ಉಲ್ಲೇಖ: 1) ಅ.ಸ.ಪ್ರ.ಸ:CEG-13011/3/2021 ದಿನಾಂಕ:31-03-2023
2) No.CEG-13011/3/2021-EPROCUREMENT date: 16/03/2023

*******

ಉಲ್ಲೇಖ ಸಂಖ್ಯೆ(1) ಮತ್ತು (2) ರಲ್ಲಿ ದಿನಾಂಕ:23/03/2023 ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನ ಆಧುನಿಕ ಆವೃತ್ತಿ 2.0ರಲ್ಲಿ ಸಂಗ್ರಹಣಾ ಘಟಕಗಳಿಗೆ ಟೆಂಡರ್/ಹರಾಜುಗಳನ್ನು ಪ್ರಕಟಿಸಲು ವೇದಿಕೆಯನ್ನು ಕಲ್ಪಿಸಿಕೊಡಲಾಗಿದೆ ಎಂಬ ಮಾಹಿತಿಯನ್ನು ಎಲ್ಲಾ ಸಂಗ್ರಹಣಾ ಘಟಕಗಳ ಇಲಾಖಾ ಮುಖ್ಯಸ್ಥರಿಗೆ ನೀಡಲಾಗಿರುತ್ತದೆ. ದಿನಾಂಕ:09/05/2023 ರಿಂದ ಹಳೆಯ ಆವೃತ್ತಿಯಲ್ಲಿ ಟೆಂಡರ್ ಹರಾಜುಗಳನ್ನು ಸೃಜಿಸುವ ಹಾಗೂ ಪ್ರಕಟಿಸುವ/ ಪ್ರಕ್ರಿಯೆಯನ್ನು ನಿಷ್ಕ್ರಿಯಗೊಳಿಸಲಾಗಿದ್ದು, ಎಲ್ಲಾ ಟೆಂಡರ್/ಹರಾಜುಗಳನ್ನು ಕಡ್ಡಾಯವಾಗಿ ಹೊಸ ಆವೃತ್ತಿಯಲ್ಲಿ ರಚಿಸಿ ಪ್ರಕಟಿಸಬೇಕಾಗಿರುತ್ತದೆ. ಈಗಾಗಲೇ ಹಳೆಯ ಆವೃತ್ತಿಯಲ್ಲಿ ಪ್ರಕಟಿಸಲಾದ ಟೆಂಡರ್/ಹರಾಜುಗಳ ಮೌಲ್ಯಮಾಪನವನ್ನು ಹಳೆಯ ಆವೃತ್ತಿಯಲ್ಲೇ ಇತ್ಯರ್ಥಗೊಳಿಸಿ ಬಿಡ್ಡುದಾರರ ಇ.ಎಂ.ಡಿ ಮೊತ್ತವನ್ನು ಮರುಪಾವತಿ ಮಾಡಲು ಕ್ರಮ ಕೈಗೊಳ್ಳಲು ಅವಕಾಶ ಕಲ್ಪಿಸಿಕೊಡಲಾಗಿದೆ.

ಮುಂದುವರೆದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನ ಹಳೆಯ ಆವೃತ್ತಿ https://eproc.karnataka.gov.in ನಲ್ಲಿ Initiated, Draft, Estimate Sanctioned , DTS Approved ಹಾಗೂ ಪ್ರಕಟಿಸುವ ಹಂತದಲ್ಲಿರುವ ಯಾವುದೇ ಟೆಂಡರ್/ಹರಾಜುಗಳನ್ನು ಹೊಸ ಆವೃತ್ತಿಗೆ ಸ್ಥಳಾಂತರಿಸಲಾಗುವುದಿಲ್ಲ ಎಂಬ ಮಾಹಿತಿಯನ್ನು ತಮ್ಮ ಅಧೀನದಲ್ಲಿನ ಇಲಾಖೆ/ಮಂಡಳಿ/ನಿಗಮ/ಸಂಸ್ಥೆಗಳ ಎಲ್ಲಾ ಸಂಗ್ರಹಣಾ ಪ್ರಾಧಿಕಾರಿಗಳಿಗೆ ಸೂಚಿಸಲು ತಮ್ಮಲ್ಲಿ ಕೋರಲು ನಿರ್ದೇಶಿತಳಾಗಿದ್ದೇನೆ.

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ 2.0 ರಲ್ಲಿ ಪೋಸ್ಟ್ ಮ್ಯಾಪಿಂಗ್ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದ್ದು ಸಂಗ್ರಹಣಾ ಬಳಕೆದಾರರಿಗೆ ನೀಡುವ Unique Identity login ID ಯನ್ನು ಅವರುಗಳು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಿಗೆ (ಪೋಸ್ಟ್ ಮ್ಯಾಪಿಂಗ್) ಮಾಡಲಾಗುವುದು.) ಆದ್ದರಿಂದ ತಮ್ಮ ಅಧೀನದಲ್ಲಿ ಬರುವ ಎಲ್ಲಾ

ಇಲಾಖೆಗಳ/ಮಂಡಳಿಗಳ/ನಿಗಮಗಳ/ಸಂಸ್ಥೆಗಳ ಸಂಗ್ರಹಣಾ ಪ್ರಾಧಿಕಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ 2.0 ತಂತ್ರಾಂಶದ ಲಾಗಿನ್ ಐಡಿಗಳನ್ನು ಪಡೆಯಲು ಇ-ಸಂಗ್ರಹಣಾ ಕೋಶವನ್ನು ಸಂಪರ್ಕಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ನೀಡಲಾದ ಸಿಬ್ಬಂದಿಗಳನ್ನು ಸಂಪರ್ಕಿಸಲು ಕೋರಿದೆ.

| ಕ್ರಮ ಸಂಖ್ಯೆ | ಹೆಸರು | ಸಂಪರ್ಕ ಸಂಖ್ಯೆ | ಇ-ಮೇಲ್ ಐಡಿ |
|---|---|---|---|
| 1 | Vishwanath M Patil | 9663012580 | tc1eproc.ceg@ka.gov.in |
| 2 | Manohar G | 9964242149 | tc5eproc.ceg@ka.gov.in |
| 3 | Manjunath R | 9008097741 | tc14eproc.ceg@ka.gov.in |
| 4 | Chethan M R | 9844938823 | tc6eproc.ceg@ka.gov.in |
| 5 | Chetan A | 9632821348 | tc8eproc.ceg@ka.gov.in |
| 6 | Mohan B N | 9740048953 | tc11eproc.ceg@ka.gov.in |
| 7 | Vinayak Prabhu | 9964569117 | tc4eproc.ceg@ka.gov.in |
| 8 | Surendra Shetty | 9740264188 | technical-consultant@ka.gov.in |

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ 2.0 ತಂತ್ರಾಂಶದ ತರಬೇತಿಯನ್ನು ದಿನಾಂಕ: 15/03/2023 ರಿಂದ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ಹಮ್ಮಿಕೊಳ್ಳಲಾಗಿದ್ದು ಈಗಾಗಲೇ ಕೆಲವು ಸಂಗ್ರಹಣಾ ಘಟಕಗಳಿಗೆ ತರಬೇತಿಯನ್ನು ನೀಡಲಾಗಿದೆ ಆದ್ದರಿಂದ ತಮ್ಮ ಅಧೀನದಲ್ಲಿನ ಇಲಾಖೆ/ಮಂಡಳಿ/ನಿಗಮ/ಸಂಸ್ಥೆಗಳ ಎಲ್ಲಾ ಸಂಗ್ರಹಣಾ ಪ್ರಾಧಿಕಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನ 2.0 ತರಬೇತಿಯನ್ನು ಕಡ್ಡಾಯವಾಗಿ ಪಡೆಯುವಂತೆ ಸೂಚಿಸಲು ತಮ್ಮಲ್ಲಿ ಕೋರಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

Priya S

ಯೋಜನಾ ನಿರ್ದೇಶಕರು

ಇ-ಸಂಗ್ರಹಣಾ ಕೋಶ

ಇ-ಆಡಳಿತ ಕೇಂದ್ರ